# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಜಲಾನಯನ ಅಭಿವೃದ್ಧಿ ಇಲಾಖೆಯ 2019-20ನೇ ಸಾಲಿನ ರಾಜ್ಯವಲಯ ಯೋಜನೆಗಳಿಗೆ ಮೂರನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಕೃಇ 41 ಕೃಯೋಕಾ 2018 ದಿನಾಂಕ: 02-04-2019.
2. ಸರ್ಕಾರದ ಆದೇಶ ಸಂಖ್ಯೆ: ಕೃಇ 58 ಕೃಯೋಕಾ 2019, ದಿನಾಂಕ: 20-04-2019.
3. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2019, ದಿನಾಂಕ: 04-07-2019.
4. ಸರ್ಕಾರದ ಆದೇಶ ಸಂಖ್ಯೆ: ಕೃಇ 58 ಕೃಯೋಕಾ 2019, ದಿನಾಂಕ: 06-08-2019.
5. ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಜಅಇ/ಲೆಕ್ಕ-5/ತ್ರೈ.ಮಾ.ಅ.ಬಿ./2019-20, ದಿನಾಂಕ:15.10.2019 ಮತ್ತು 11-11-2019.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ, 2018-19ನೇ ಸಾಲಿನಲ್ಲಿ ಕೃಷಿ ಇಲಾಖೆಯಲ್ಲಿ ಚಾಲ್ತಿಯಲ್ಲಿದ್ದ ಯೋಜನೆಗಳನ್ನು 2019-20ನೇ ಸಾಲಿನಲ್ಲಿ ಮುಂದುವರೆಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ, 2019-20ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ, ಮುಂದುವರೆಸಲಾದ ಎರಡು ರಾಜ್ಯವಲಯ ಯೋಜನೆಗಳಿಗೆ ಒದಗಿಸಲಾಗಿರುವ ರೂ.1753.00 ಲಕ್ಷಗಳಲ್ಲಿ, ಮೊದಲನೇ ತ್ರೈಮಾಸಿಕಕ್ಕೆ ಒಟ್ಟು ರೂ.438.25 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದೆ.

ಮೇಲೆ ಓದಲಾದ (3)ರ ಆದೇಶದನ್ವಯ, ರಾಜ್ಯ ಯೋಜನೆಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಶೇ.25 ರಂತೆ ಎರಡನೇ ಹಾಗೂ ಮೂರನೇ ಕಂತಿನ ಅನುದಾನ ಬಿಡುಗಡೆಗೆ ಸರ್ಕಾರದ ಕಾರ್ಯದರ್ಶಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಮೇಲೆ ಓದಲಾದ (4)ರ ಸರ್ಕಾರಿ ಆದೇಶದಲ್ಲಿ, 2019-20ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ, ಮುಂದುವರೆಸಲಾದ ಎರಡು ರಾಜ್ಯವಲಯ ಯೋಜನೆಗಳಿಗೆ ಒದಗಿಸಲಾಗಿರುವ ರೂ.1753.00 ಲಕ್ಷಗಳಲ್ಲಿ, ಎರಡನೇ ತ್ರೈಮಾಸಿಕಕ್ಕೆ ಒಟ್ಟು ರೂ.438.25 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದೆ.

ಮೇಲೆ ಓದಲಾದ (5)ರ ಪ್ರಸ್ತಾವನೆಯಲ್ಲಿ, ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತರು, 2019-20ನೇ ಸಾಲಿನ ಚಾಲ್ತಿ ಯೋಜನೆಗಳಲ್ಲಿ ಮುಂದುವರೆಸಲಾಗಿರುವ ಒಟ್ಟು 2 ಯೋಜನಾ ಕಾರ್ಯಕ್ರಮಗಳಿಗೆ ಮೂರನೇ ತ್ರೈಮಾಸಿಕಕ್ಕೆ ಆಯವ್ಯಯದ ಲೆಕ್ಕಶೀರ್ಷಿಕೆಯಡಿ ಒದಗಿಸಲಾದ ಅನುದಾನದಲ್ಲಿ ಒಟ್ಟು.ರೂ.**438.25** ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

..2)

ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 58 ಕೃಯೋಕಾ 2019, ಬೆಂಗಳೂರು, ದಿನಾಂಕ: 22-11-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, **2019-20ನೇ ಸಾಲಿನಲ್ಲಿ ಮುಂದುವರೆಸಲಾದ ಈ ಕೆಳಕಂಡ 2 ರಾಜ್ಯವಲಯ ಯೋಜನೆಗಳಿಗೆ ಮೂರನೇ ತ್ರೈಮಾಸಿಕಕ್ಕೆ ಒಟ್ಟು ರೂ.438.25 ಲಕ್ಷಗಳ (ನಾಲ್ಕುನೂರ ಮೂವತ್ತೆಂಟು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಿದೆ.**

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | 2019-20ನೇ ಸಾಲಿಗೆ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನ | ಮೂರನೇ ತ್ರೈಮಾಸಿಕ ಅವಧಿಗೆ ಬಿಡುಗಡೆಗೊಳಿಸಿದ ಅನುದಾನ |
|---|---|---|---|
| 1 | 2402-00-102-0-15 ಭೂಸಾರ ಮತ್ತು ಜಲ ಸಂರಕ್ಷಣೆ ಜಲಾನಯನ ಅಭಿವೃದ್ಧಿ ಇಲಾಖೆ ಜಲಾನಯನ ಅಭಿವೃದ್ಧಿ ನಿರ್ದೇಶನಾಲಯ | 1616.00 | 404.00 |
| 2 | 2402-00-109-0-02 ಕರ್ನಾಟಕ ಜಲಾನಯನ ತರಬೇತಿ ಕೇಂದ್ರಗಳು | 137.00 | 34.25 |
| | **ಒಟ್ಟು ಮೊತ್ತ:** | **1753.00** | **438.25** |

**ಷರತ್ತುಗಳು:-**

1. 2018-19ನೇ ಸಾಲಿನಲ್ಲಿದ್ದ ಕಾರ್ಯಕ್ರಮ / ಘಟಕಗಳನ್ನು ಮಾತ್ರ 2019-20ನೇ ಸಾಲಿನಲ್ಲಿ ಮುಂದುವರೆಸಲಾಗಿದ್ದು, ಸದರಿ ಕಾರ್ಯಕ್ರಮ / ಘಟಕಗಳಿಗೆ ಮಾತ್ರ ಅನುದಾನ ಬಳಸತಕ್ಕದ್ದು, ಯಾವುದೇ ಹೊಸ ಘಟಕ / ಕಾರ್ಯಕ್ರಮ ಅನುಷ್ಠಾನಗೊಳಿಸಬೇಕಾದ್ದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಪಿಡಿ 14 ಐಎಂಎಂ 2017, ದಿನಾಂಕ: 23-03-2017 ರನ್ವಯ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿ ಅನುಮೋದನೆ ಪಡೆದ ನಂತರವಷ್ಟೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು.

2. 2019-20ನೇ ಸಾಲಿನ ನಾಲ್ಕನೇ ತ್ರೈಮಾಸಿಕದ ಅನುದಾನ ಬಿಡುಗಡೆಗೆ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ/01/ಟಿಎಫ್‌ಪಿ/2019, ದಿನಾಂಕ: 04-07-2019 ರಲ್ಲಿ ನೀಡಿರುವ ಮಾರ್ಗಸೂಚಿಯನ್ವಯ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸತಕ್ಕದ್ದು.

3. ನಾಲ್ಕನೇ ತ್ರೈಮಾಸಿಕಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಸದರಿ ಕಾರ್ಯಕ್ರಮಗಳಲ್ಲಿ ಹಿಂದಿನ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಿದ ಅನುದಾನಕ್ಕೆ ಭರಿಸಲಾದ ವೆಚ್ಚ, ಶೇಕಡವಾರು ಪ್ರಗತಿಯ ಬಗ್ಗೆ ಉಪಯೋಗಿತ ಪ್ರಮಾಣ ಪತ್ರವನ್ನು ಸಲ್ಲಿಸುವುದು.

4. 2019-20ನೇ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಒದಗಿಸಿರುವ ಅನುದಾನದಲ್ಲಿ ಶೇ.75 ರಷ್ಟು ವೆಚ್ಚ ಭರಿಸಿದ ನಂತರ, 4 ನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸುವುದು.

5. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಎಫ್‌ಡಿ/01/ಟಿಎಫ್‌ಪಿ/2019, ದಿನಾಂಕ: 20-08-2019ರ ಅನುಸಾರ ಕ್ರಮವಹಿಸುವುದು

ಈ ಆದೇಶವನ್ನು ಟಿಪ್ಪಣಿ ಸಂ: ಕೃಇ/79/ಆಂಆಸ/2019, ದಿನಾಂಕ: 20-11-2019 ರಲ್ಲಿ ಆಂತರಿಕ ಆರ್ಥಿಕ ಸಲಹೆಗಾರರು ನೀಡಿರುವ ಸಹಮತಿ ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/01/ಟಿಎಫ್‌ಪಿ/2019, ದಿನಾಂಕ: 04-07-2019 ಮತ್ತು ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನಾ ಸಂಖ್ಯೆ: ಎಫ್‌ಡಿ 01 ಬಿಪಿಇ 2019 ದಿನಾಂಕ 23.10.2019 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagaratnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್‌ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
3. ಮಹಾಲೇಖಪಾಲರು (ಎ ಮತ್ತು ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂ: 5329, ಬೆಂಗಳೂರು-01.
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ಆಯುಕ್ತರು/ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
6. ಆಯುಕ್ತರು, ತೋಟಗಾರಿಕೆ ಇಲಾಖೆ, ಬೆಂಗಳೂರು
7. ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ವಿಭಾಗ, ಬೆಂಗಳೂರು.
8. ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
10. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನಸೌಧ, ಬೆಂಗಳೂರು
12. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
13. ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
14. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು ರವರಿಗೆ ಮಾಹಿತಿಗಾಗಿ ನೀಡಲಾಗಿದೆ (ಕೃಷಿ ಆಯುಕ್ತರ ಮುಖಾಂತರ).
15. ತಾಂತ್ರಿಕ ಅಧಿಕಾರಿಗಳು, ಕೃಷಿ ಯೋಜನಾ ಘಟಕ, ಎ ಮತ್ತು ಬಿ, ಕೃಷಿ ಇಲಾಖೆ.
16. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ -

1. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು
3. ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಶಾಖೆ.

***